ದಿನಾಂಕಃ **31-05-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿಡಿ ವಕೀಲರಿಂದ,</u>**

1) ನಾನು ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಮತ್ತು ನನ್ನ ತಾಯಿ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ. ಮೃತ 2 ನೇ ಪ್ರತಿವಾದಿ ಗಂಡನ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ದಾವಾ ಸ್ವತ್ತುಗಳ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತು. ದಾವಾ ಸ್ವತ್ತುಗಳ ಪಕ್ಕದಲ್ಲಿ ಕಾಂತರಾಜು ಮತ್ತು ಅನುಸೂಯಮ್ಮ ರವರ ಜಮೀನು ಇತ್ತು ಎಂದರೆ ಸರಿ. ಅದೇ ರೀತಿ ಬಸವರಾಜುರವರ ಪತ್ನಿ ಲೀಲಾವತಿ ರವರ ಆಸ್ತಿ ಇತ್ತು ಎಂದರೆ ಸರಿ. ಅದೇ ರೀತಿ ಅಣ್ಣೇಗೌಡರ ಮಗ ಮೋಹನ್ ಕುಮಾರ್ ರವರ ಆಸ್ತಿ ಇತ್ತು ಎಂದರೆ ಸರಿ.

2) ದಿಃ 20-04-2019 ರಂದು ನಾನು ನನ್ನ ತಾಯಿ ಮತ್ತು ನನ್ನ ಸಹೋದರಿ ವಾದಿಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದು ಸಾಕ್ಷಿ ಸಾಲದ ಭದ್ರತೆಗೆ ಬರೆದುಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಅದೇ ದಿನ ಮೋಹನ್‌ಕುಮಾರ್ ರವರ ವಾದಿ ಪರವಾಗಿ ತನಗೆ ಸೇರಿದ ಆಸ್ತಿಯ ಬಗ್ಗೆ ಕರಾರು ಪತ್ರ ಬರೆದುಕೊಟ್ಟಿದ್ದು ಸದರಿ ಕರಾರು ಪತ್ರದ ಆಧಾರದ ಮೇಲೆ ಅಸಲು ದಾವೆ 41/2021 ರಂತೆ ದಾವೆ ಸಲ್ಲಿಸಿ ರಾಜಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲೀಲಾವತಿ ಮತ್ತು ಸಾವಿತ್ರಮ್ಮ ರವರ ಆಸ್ತಿಗಳನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

3) ಪ್ರತಿವಾದಿ 1 ಮತ್ತು 2 ರವರು ತಕರಾರು ಸಲ್ಲಿಸಿರುವುದಿಲ್ಲ. ವಾದಿ ಸಾವಿತ್ರಮ್ಮ, ಲೀಲಾವತಿ ಮತ್ತು ಮೋಹನ್ ಕುಮಾರ್ ಮಾರಾಟ ಮಾಡಿರುವ ಆಸ್ತಿಗಳಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ದಿಃ 20-06-2020 ರಂದು ವಾದಿ ತನ್ನ ವಕೀಲರ ಮೂಲಕ ನನಗೆ ನನ್ನ ತಾಯಿಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸರ್ವೆ ನಂ. 1136/1 ರಲ್ಲಿ 39 ಗುಂಟೆ ಮತ್ತು 1162/1 ರಲ್ಲಿ 39 ಗುಂಟೆ ಆಸ್ತಿ ಇದೆ ಎಂದರೆ ಸರಿ.

ಸಾಕ್ಷಿಯು ಸದರಿ ಆಸ್ತಿಯ ಪಹಣಿ ಪತ್ರಿಕೆಗಳನ್ನು ಒಪ್ಪಿಕೊಂಡ ಕಾರಣ ಸದರಿ ಪಹಣಿ ಪತ್ರಿಕೆಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು. ಸದರಿ ಆಸ್ತಿಗಳಲ್ಲದೇ ಇತರೆ ಜಮೀನು ಮತ್ತು ಮನೆ ಇದೆ ಎಂದರೆ ಸರಿ. ನಾವು ಮತ್ತು ನಮ್ಮ ಜಮೀನಿನ ಬಾಜುದಾರರು ಜಮೀನುಗಳನ್ನು ಮಾರಾಟ ಮಾಡುತ್ತೇವೆ ಎಂದು ವಾದಿ ಜೊತೆ ಮಾತುಕತೆ ಮಾಡಿ ನಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ನಿಪಿ 1 ರಂತೆ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

4) ನಿಪಿ 1 ಕರಾರು ಪತ್ರವನ್ನು ಮಾರಾಟ ಮಾಡುವ ಉದ್ದೇಶದಿಂದ ಬರೆದುಕೊಟ್ಟಿದ್ದರೂ ಸಹ ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರದಡಿಯಲ್ಲಿ ನಾವುಗಳು ಮೂರು ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರವನ್ನು ಅನುಷ್ಠಾನ ಗೊಳಿಸಲು ಬದ್ದರಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಭಾವಚಿತ್ರಗಳು ನಮಗೆ ಸೇರಿದ ಆಸ್ತಿಯ ಭಾವಚಿತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಭಾವಚಿತ್ರಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ದಾವೆಯ ಅನುಕೂಲಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.